ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE

# ತ.ನಾಡು ಯೋಜನೆ ರಾಜ್ಯಕ್ಕೆ ಅಪಾಯ?

## ಕಾವೇರಿ ಹೆಚ್ಚುವರಿ ನೀರು ಬಳಕೆಗೆ ಮುಂದಾದ ನೆರೆ ರಾಜ್ಯ | ಯೋಜನೆಗೆ ಇಂದು ಅಡಿಗಲ್ಲು

ರಾಘವ ಶರ್ಮ ನಿಡ್ಲೆ, ನವದೆಹಲಿ

ಕಾವೇರಿ ನೀರಿನ ಹೆಚ್ಚುವರಿ ಪಾಲನ್ನು ಕರ್ನಾಟಕಕ್ಕೆ ಬಳಸಿಕೊಳ್ಳುವ ಅಧಿಕಾರವಿಲ್ಲ ಎಂದು ಕೇಂದ್ರ ಸರ್ಕಾರದೊಂದಿಗೆ ಸದಾ ತಕರಾರು ಮುಂದಿಡುತ್ತಿದ್ದ ತಮಿಳುನಾಡು ಸರ್ಕಾರ, ಈಗ ಅದೇ ಕಾವೇರಿಯ ಹೆಚ್ಚುವರಿ ನೀರನ್ನು ಬಳಸಿಕೊಂಡು ಕಾವೇರಿ-ಗುಂಡಾರ್ ನದಿ ಜೋಡಣೆ ಯೋಜನೆಗೆ ಚಾಲನೆ ನೀಡಲು ಮುಂದಾಗಿದೆ. ಭಾನುವಾರ ತ.ನಾಡು ಸಿಎಂ ಎ. ಪಳನಿಸ್ವಾಮಿ ಈ ಯೋಜನೆಯ ಮೊದಲನೇ ಹಂತದ ಕಾಮಗಾರಿಗೆ ಅಡಿಗಲ್ಲು ಹಾಕಲಿದ್ದಾರೆ.

ಕಾವೇರಿಯ ಹೆಚ್ಚುವರಿ ನೀರು ತಮಿಳುನಾಡಿಗೆ ಹರಿದು ನಂತರ ಸಮುದ್ರ ಪಾಲಾಗುವ ಬದಲು ಮೇಕೆದಾಟು ಜಲಾಶಯ ನಿರ್ಮಾಣದ ಜತೆಗೆ ಜಲ ವಿದ್ಯುತ್ ಯೋಜನೆಯನ್ನು ಕರ್ನಾಟಕ ಕೈಗೆತ್ತಿಕೊಂಡ ದಿನದಿಂದ ವಿರೋಧ ವ್ಯಕ್ತಪಡಿಸುತ್ತಿದ್ದ ತಮಿಳುನಾಡು, ಪ್ರಧಾನಮಂತ್ರಿಗೂ ಹಲವು ಬಾರಿ ಪತ್ರ ಬರೆದು ಈ ಯೋಜನೆಗೆ ತಡೆನೀಡಬೇಕು ಎಂದು ಒತ್ತಾಯಿಸಿತ್ತು. ಸುಪ್ರೀಂಕೋರ್ಟ್‌ಗೆ ಕೂಡ ತಕರಾರು ಅರ್ಜಿಗಳನ್ನು ಸಲ್ಲಿಸಲಾಗಿದೆ. ಕಾವೇರಿ ನೀರು ನಿರ್ವಹಣಾ ಸಮಿತಿ ಮುಂದೆ ಕೂಡ ವಿವಾದವಿದ್ದು, ಇನ್ನೂ ಬಗೆಹರಿದಿಲ್ಲ. ಈ ನಡುವೆಯೇ ಕಾವೇರಿಯ ಹೆಚ್ಚುವರಿ ನೀರಿನ ಬಳಕೆಗೆ ತ.ನಾಡು ಯೋಜನೆ ರೂಪಿಸಿರುವುದರಿಂದ ಕರ್ನಾಟಕ ಸರ್ಕಾರದ ನಡೆ ಏನಿರಲಿದೆ ಎಂಬುದು ಕುತೂಹಲ ಮೂಡಿಸಿದೆ. ಇದು ಕೇಂದ್ರ ಸರ್ಕಾರ ಮತ್ತು ತ.ನಾಡು ಜಂಟಿಯಾಗಿ ಕೈಗೊಂಡಿರುವ ಯೋಜನೆಯಾಗಿರುವುದರಿಂದ ಕರ್ನಾಟಕದ ಮುಂದಿರುವ ಹಾದಿ ಸುಲಭದ್ದೇನಲ್ಲ! ತಮಿಳುನಾಡು ವಿಧಾನಸಭೆ ಚುನಾವಣೆಗೆ ಇನ್ನೇನು ಕೆಲವೇ ದಿನಗಳಿರುವುದರಿಂದ ಈ ಯೋಜನೆ ಮೂಲಕ ಜನರನ್ನು ಆಕರ್ಷಿಸಬಹುದು ಎಂಬುದು ಎಐಎಡಿಎಂಕೆ-ಬಿಜೆಪಿ ಮೈತ್ರಿಕೂಟದ ನಾಯಕರ ಆಲೋಚನೆ ಎಂದೂ ವಿಶ್ಲೇಷಿಸಲಾಗುತ್ತಿದೆ.



**ದಿಲ್ಲಿಯಲ್ಲಿ ಜಾರಕಿಹೊಳಿ:** ರಾಜ್ಯ ಜಲ ಸಂಪನ್ಮೂಲ ಸಚಿವ ರಮೇಶ್ ಜಾರಕಿಹೊಳಿ ಅವರು ಶನಿವಾರ ದೆಹಲಿಗೆ ಬಂದಿದ್ದು, ರಾಜ್ಯದ ಜಲ ವ್ಯಾಜ್ಯಗಳ ಬಗ್ಗೆ ಚರ್ಚಿಸಲೆಂದೇ ಭಾನುವಾರ ರಾಜ್ಯ ಕಾನೂನು ತಂಡದ ಸಭೆ ಕರೆದಿದ್ದಾರೆ. ಈ ಸಭೆಯಲ್ಲಿ ತ.ನಾಡು ಯೋಜನೆ ಬಗ್ಗೆ ಚರ್ಚೆಯಾಗುವ ಸಾಧ್ಯತೆಯಿದೆ.

**ತ.ನಾಡು ಯೋಜನೆಯೇನು:** ಒಟ್ಟು 14,400 ಕೋಟಿ ರೂ. ವೆಚ್ಚದ 262 ಕಿ.ಮೀ. ಕಾವೇರಿ-ವೆಲ್ಲಾರು-ವೈಗೈ-ಗುಂಡಾರ್ ನದಿ ಜೋಡಣೆ ಯೋಜನೆ ಇದಾಗಿದ್ದು, 3 ಹಂತಗಳಲ್ಲಿ ಜಾರಿ ಮಾಡಲಿದೆ. ಪ್ರವಾಹದ ಸಂದರ್ಭಗಳಲ್ಲಿ (ಮಾನ್ಸೂನ್ ತಿಂಗಳಲ್ಲಿ) ದಿನಕ್ಕೆ 6,300 ಕ್ಯೂಬಿಕ್ ಅಡಿ ಹೆಚ್ಚುವರಿ ನೀರನ್ನು ದಕ್ಷಿಣ ತಮಿಳುನಾಡು ಜಿಲ್ಲೆಗಳಿಗೆ ಹರಿಸುವ ಮೂಲಕ ಈ ಪ್ರದೇಶಗಳಲ್ಲಿ ಅಂತರ್ಜಲ ಪ್ರಮಾಣ ಹೆಚ್ಚಿಸಲಿದೆ ಎಐಎಡಿಎಂಕೆ ಸರ್ಕಾರದ ಚಿಂತನೆ. ಅಂದರೆ, ಸುಮಾರು 45 ಟಿಎಂಸಿ ಹೆಚ್ಚುವರಿ ಕಾವೇರಿ ನೀರನ್ನು ಬಳಸಿಕೊಳ್ಳುವ ಅಂದಾಜು ಹಾಕಿಕೊಳ್ಳಲಾಗಿದೆ. ಯೋಜನೆಯ ಮೊದಲ ಹಂತದಲ್ಲಿ ಕರೂರಿನ ಮಾಯನೂರು ಜಲಾಶಯದಿಂದ ಹೆಚ್ಚುವರಿ ಕಾವೇರಿ ನೀರನ್ನು ತಿರುಚ್ಚಿ, ಪುದುಕೊಟ್ಟೈ, ಶಿವಗಂಗೆ ಮತ್ತು ವಿರುಧುನಗರ ಜಿಲ್ಲೆಗಳ ಮೂಲಕ ಗುಂಡಾರ್ ನದಿಯೊಂದಿಗೆ ಸಂಪರ್ಕಿಸುತ್ತದೆ. ಇಲ್ಲಿನ ಕಟ್ಟಲೈ ಕಾಲುವೆಯಿಂದ 118 ಕಿ.ಮೀ. ಕಾಲುವೆಯನ್ನು ಪುದುಕೊಟ್ಟೈನ ದಕ್ಷಿಣ ವೆಲ್ಲಾರುವರೆಗೆ ನಿರ್ಮಾಣ ಮಾಡುವುದರಿಂದ 42170 ಎಕರೆ ಕೃಷಿ ಭೂಮಿ ಮತ್ತು ಕರೂರು, ತಿರುಚ್ಚಿ ಮತ್ತು ಪುದುಕೊಟ್ಟೈನ 342 ಕೆರೆಗಳನ್ನು ಭರ್ತಿ ಮಾಡಲಾಗುವುದು. 2ನೇ ಹಂತದಲ್ಲಿ 220 ಕೆರೆಗಳು ಮತ್ತು 23245 ಎಕರೆ ಕೃಷಿಭೂಮಿ ಹಾಗೂ 3ನೇ ಹಂತದಲ್ಲಿ 492 ಕೆರೆಗಳು ಮತ್ತು 44547 ಎಕರೆ ಕೃಷಿ ಭೂಮಿಗೆ ನೀರಾವರಿ ಒದಗಿಸಲು ಸರ್ಕಾರ ಯೋಜನೆ ರೂಪಿಸಿಕೊಂಡಿದೆ.

### ಕರ್ನಾಟಕ ಏನು ಮಾಡಬಹುದು

- ತ.ನಾಡು ಯೋಜನೆಯಿಂದ ರಾಜ್ಯದ ಉದ್ದೇಶಿತ ಮೇಕೆದಾಟು ಯೋಜನೆಗೆ ಹಾನಿಯಾಗದಂತೆ ನೋಡಿಕೊಳ್ಳಬೇಕು.
- ಮೇಕೆದಾಟು ಯೋಜನೆಗೆ ಸಮ್ಮತಿ ಪಡೆದುಕೊಳ್ಳುವ ಪ್ರಕ್ರಿಯೆ ತ್ವರಿತಗೊಳಿಸಬೇಕು
- ತ.ನಾಡಿನ ಹೆಚ್ಚುವರಿ ನೀರಿನ ಬಳಕೆ ಯೋಜನೆಗೆ ವಿರೋಧ ವ್ಯಕ್ತಪಡಿಸಿದ್ದೇ ಆದಲ್ಲಿ, ಅದನ್ನು ಸುಪ್ರೀಂಕೋರ್ಟ್‌ನಲ್ಲಿ ಅಥವಾ ನ್ಯಾಯಾಧಿಕರಣದ ಮುಂದೆ ಪ್ರಶ್ನಿಸಲು ತಯಾರಿ ನಡೆಸಬೇಕು. ಅದಕ್ಕೂ ಮುನ್ನ ಕೇಂದ್ರ ಸರ್ಕಾರದ ಮುಂದೆಯೂ ಪ್ರತಿಭಟಿಸಬೇಕು.
- ಈ ಯೋಜನೆಗೆ ಕಾವೇರಿ ನೀರು ನಿರ್ವಹಣಾ ಮಂಡಳಿ ಒಪ್ಪಿಗೆ ಪಡೆದುಕೊಳ್ಳದಿರುವುದರ ಬಗ್ಗೆ ಪ್ರಶ್ನಿಸಬೇಕು